## ಹೋಗುವುದು ಹೇಗೆ?

ಭುವನೇಶ್ವರಕ್ಕೆ ರೈಲು ಅಥವಾ ವಿಮಾನದಲ್ಲಿ ಹೋಗಬಹುದು. ಅಲ್ಲಿಂದ ಟ್ಯಾಕ್ಸಿ ಮಾಡಿಕೊಂಡು ಮಂಗಲಜೋಡಿಗೆ ಹೋಗಬೇಕು. ಒಡಿಶಾ ಟೂರಿಸಂನಿಂದ ನೋಂದಾಯಿಸಲಾದ 'ಗಾಡ್ವಿಟ್ ಇಕೋ ಕಾಟೇಜ್'ನಂತಹ ಊಟ–ವಸತಿ ಇರುವ ಕೆಲವೇ ಕಾಟೇಜ್‌ಗಳಲ್ಲಿ ಉಳಿಯಬಹುದು. ಅಲ್ಲಿಂದ ಬೆಳಗ್ಗೆ ಮತ್ತು ಮಧ್ಯಾಹ್ನ ಬೋಟ್ ಹೊರಡುವ ಸ್ಥಳಕ್ಕೆ ಆಟೋದಲ್ಲಿ ಹೋಗಿ ಬೋಟಿನ ಟಿಕೇಟ್ ಪಡೆದು ಹಕ್ಕಿ ವೀಕ್ಷಣೆ ಮತ್ತು ಫೋಟೊಗ್ರಫಿ ಮಾಡಬಹುದು. ಎರಡು ಗಂಟೆಯ ಬೋಟ್ ಪ್ರಯಾಣಕ್ಕೆ 1,200 ರೂಪಾಯಿ ಶುಲ್ಕ.





**ಚಿತ್ರ ವಿವರ**

1. ನೆಲದಲ್ಲಿನ ಪಕ್ಷಿಯ ಕೊಕ್ಕಿನಲ್ಲಿನ ಹಾವನ್ನು ಕಸಿದುಕೊಳ್ಳಲು ಧಾವಿಸುತ್ತಿರುವ ಗರುಡ
2. ಹಾವಿಗಾಗಿ ಎರಡು ಹಕ್ಕಿಗಳ ಹೋರಾಟ
3. ಐಬಿಸ್ ಹಕ್ಕಿಯಿಂದ ಹಾವಿನ ಬೇಟೆ
4. ಮೀನು ಹಿಡಿದ ಸೀಗಲ್ ಹಕ್ಕಿಯ ಬೆನ್ನತ್ತಿದ ಟರ್ನ್ ಹಕ್ಕಿ

ಈ ದೃಶ್ಯಾವಳಿಯನ್ನು ನೋಡುತ್ತಾ ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದ ನನಗೆ ಮಾತು ಹೊರಡದಂತಾಗಿತ್ತು. ಆಗ ನನ್ನ ಹಿಂದೆ ಕುಳಿತಿದ್ದ ಗೈಡ್ ಸನಾತನ್ ಬೆಹ್ರಾ, 'ಪರರಿಂದ ಕಿತ್ತು ತಿನ್ನುವ ಬುದ್ಧಿಯನ್ನು ಮನುಷ್ಯ ಇವನ್ನು ನೋಡಿಯೇ ಕಲಿತಿರಬೇಕು' ಎಂದರು. ತಕ್ಷಣವೇ, 'ಹೌದಲ್ವಾ!' ಅನ್ನಿಸಿತು. ನಂತರ, 'ಹಾಗಲ್ಲಾ ಸನಾತನ್ ಜಿ, ಇದು ನಿಸರ್ಗದ ಆಹಾರ ಸರಪಣಿ. ಮನುಷ್ಯನ ಕೆಟ್ಟಗುಣವನ್ನು ಇವಕ್ಕೆ ಹೋಲಿಕೆ ಮಾಡಲಾಗದು' ಎಂದೆ.

ಹಾವಿಗಾಗಿ ನಡೆದ ಈ ಜುಗಲ್‌ಬಂದಿಯ ತಾಣ ಮಂಗಲಜೋಡಿ. ಒಡಿಶಾದ ಚಿಲ್ಕಾ ಸರೋವರದ ತೀರದಲ್ಲಿ ಭುವನೇಶ್ವರದಿಂದ ಕೇವಲ 75 ಕಿ.ಮೀ. ದೂರದಲ್ಲಿದೆ ಈ ಸ್ಥಳ. ಇಲ್ಲಿನ ದೊಡ್ಡದಾದ ಜವುಗು ಪ್ರದೇಶಗಳು, ತೆರೆದ ನೀರಿನ ಹಾಸು ಸಾವಿರಾರು ವಲಸೆ ಮತ್ತು ನಿವಾಸಿ ಪಕ್ಷಿಗಳಿಗೆ ಆಶ್ರಯತಾಣ.

'ಮಂಗಲಜೋಡಿಯಲ್ಲಿ 200ಕ್ಕಿಂತ ಹೆಚ್ಚು ಸಂಖ್ಯೆಯ ಹಕ್ಕಿಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ಹೆಚ್ಚಿನವು ವಲಸೆ ಹಕ್ಕಿಗಳು, ಚಳಿಗಾಲದಲ್ಲಿ ದೊಡ್ಡ ಸಂಖ್ಯೆಯಲ್ಲಿ ಹಕ್ಕಿಗಳು ಇಲ್ಲಿಗೆ ಬರುತ್ತವೆ. ರಾಜಸ್ಥಾನದ ಭರತ್‌ಪುರಕ್ಕಿಂತ ಹೆಚ್ಚಿನ ಸಂಖ್ಯೆಯ ಹಕ್ಕಿಗಳು ಇಲ್ಲಿಗೆ ಬರುತ್ತವೆ. ಈ ಕಾರಣದಿಂದಲೇ ಈ ಹಿಂದೆ ಪ್ರತೀ ವರ್ಷ ಭರತ್‌ಪುರದಲ್ಲಿ ನಡೆಯುತ್ತಿದ್ದ 'ನ್ಯಾಷನಲ್ ಬರ್ಡ್ ಫೆಸ್ಟಿವಲ್' ಅನ್ನು ಈಗ ಮಂಗಲಜೋಡಿಯಲ್ಲಿ ನಡೆಸಲಾಗುತ್ತಿದೆ' ಎಂದು ಈ ಪಕ್ಷಿಕಾಶಿಯ ಬಗ್ಗೆ ಹೆಮ್ಮೆಯಿಂದ ಹೇಳಿದರು ಸನಾತನ್ ಬೆಹ್ರಾ.




'ಇಲ್ಲಿ ಹಕ್ಕಿಗಳಿಗೆ ಯಾರೂ ತೊಂದರೆ ಮಾಡಲ್ವಾ?' ಎಂದು ಅವರನ್ನು ಕೇಳಿದೆ. 'ಈಗ ಯಾರೂ ಹಕ್ಕಿಗಳಿಗೆ ತೊಂದರೆ ಮಾಡಲ್ಲ ಸರ್. ಆದರೆ, ಸುಮಾರು 20 ವರ್ಷಗಳ ಹಿಂದೆ ಹೀಗಿರಲಿಲ್ಲ. ಇಲ್ಲಿ ಹಕ್ಕಿಗಳ ಬೇಟೆ ನಡೆಯುತ್ತಿತ್ತು. ಅವುಗಳನ್ನು ತಿಂದು ತೇಗಿ ಮಾರಿ ನಾವೆಲ್ಲಾ ಜೀವನ ನಡೆಸುತ್ತಿದ್ದೆವು. ನಂದಕಿಶೋರ್ ಭುಜಬಲ್ ನೇತೃತ್ವದ ವೈಲ್ಡ್ ಒಡಿಶಾ ಎಂಬ ಸ್ವಯಂಸೇವಾ ಸಂಸ್ಥೆ ಆಗ ಹಕ್ಕಿಗಳ ರಕ್ಷಣಾ ಪ್ರಯತ್ನ ಮಾಡಿತು. ಸ್ಥಳೀಯರ ಮನಗೆದ್ದು ಬೇಟೆ ಪ್ರವೃತ್ತಿಯನ್ನು ಬಿಡಿಸಿತು. ಶ್ರೀ ಶ್ರೀ ಮಹಾವೀರ್ ಪಕ್ಷಿ ಸುರಕ್ಷಾ ಸಮಿತಿಯ ಸ್ಥಾಪನೆಯಾಯಿತು. ಹಕ್ಕಿ ಬೇಟೆಗಾರರಿಗೆ ತರಬೇತಿ ನೀಡಿ ಪ್ರವಾಸಿಗರಿಗೆ, ಫೋಟೊಗ್ರಾಫರ್‌ಗಳಿಗೆ ಹಕ್ಕಿಗಳ ಮಾರ್ಗದರ್ಶಿಗಳನ್ನಾಗಿ ಮಾಡಲಾಯಿತು' ಎಂದು ಬೆಹ್ರಾ ವಿವರಿಸಿದರು.

ನಮ್ಮ ಗೈಡ್ ಸನಾತನ್ ಬೆಹ್ರ ಶಾಲೆಯಲ್ಲಿ ಅಕ್ಷರ ಕಲಿತವರಲ್ಲ. ಒಡಿಶಾ ಭಾಷೆಯನ್ನು ಮತ್ತು ಇಂಗ್ಲಿಷನ್ನು ಅವರಿವರಿಂದ ಕಷ್ಟಪಟ್ಟು ಕಲಿತು, ಈಗ ನೂರಾರು ಹಕ್ಕಿಗಳ ಹೆಸರನ್ನು ಸರಾಗವಾಗಿ ಹೇಳಬಲ್ಲವರಾಗಿದ್ದಾರೆ.

'ಮಹಾವೀರ್ ಪಕ್ಷಿ ಸುರಕ್ಷಾ ಸಮಿತಿ' ಪ್ರಾರಂಭಗೊಂಡಾಗ ಆರೇಳು ಮಂದಿ ಸದಸ್ಯರಿದ್ದವರು ಈಗ 38 ಮಂದಿಯಾಗಿದ್ದಾರೆ. ಇವರದ್ದೇ ಸಮವಸ್ತ್ರವಿದೆ, ಸರ್ಕಾರ ಮತ್ತು ಸೇವಾ ಸಂಸ್ಥೆಗಳು ನೀಡಿರುವ ಬೈನಾಕ್ಯುಲರ್, ಪಕ್ಷಿವೀಕ್ಷಣಾ ಪುಸ್ತಕಗಳು, ಲೈಫ್ ಜಾಕೆಟ್ಸ್ ಜೊತೆಯಲ್ಲಿ ಸಾಂಘಿಕ ಶಿಸ್ತು ಇವರಲ್ಲಿದೆ. ನಾಲ್ಕು ತಿಂಗಳು ಮಾತ್ರ ಇವರು ಮಾರ್ಗದರ್ಶಿಗಳಾಗಿರುತ್ತಾರೆ. ಉಳಿದಂತೆ ಇವರು ತಮ್ಮ ಮೂಲ ವೃತ್ತಿಯಾದ ಮೀನು ಹಿಡಿಯುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ. ಹಕ್ಕಿಗಳ ತಂಟೆಗೆ ಇವರೂ ಹೋಗುವುದಿಲ್ಲ, ಇತರರಿಗೂ ಹೋಗಲು ಬಿಡುವುದಿಲ್ಲ.

ವಲಸೆ ಹಕ್ಕಿಗಳು ನವೆಂಬರ್ ತಿಂಗಳಿನಿಂದ ಮಾರ್ಚ್‌ವರೆಗೆ ಮಾತ್ರ ಇರುವ ಕಾರಣ ಈ ನಾಲ್ಕೈದು ತಿಂಗಳಿನಲ್ಲಿ ಪ್ರವಾಸಿಗರು ಹೆಚ್ಚಾಗಿ ಆಗಮಿಸುತ್ತಾರೆ. ಸ್ಥಳೀಯ ಜನಸಮುದಾಯದ ಸಹಭಾಗಿತ್ವದಲ್ಲಿ ಪರಿಸರ ಸಂರಕ್ಷಣೆ, ಪರಿಸರ ಪಾಠ, ಪ್ರವಾಸೋದ್ಯಮ, ಸ್ಥಳೀಯರಿಗೆ ಉದ್ಯೋಗ, ಎಲ್ಲಕ್ಕಿಂತ ಹೆಚ್ಚಾಗಿ ಹಕ್ಕಿಗಳ ಸಂರಕ್ಷಣೆ ನಡೆಯುತ್ತಿರುವುದು ಮಂಗಲಜೋಡಿಯ ಹೆಗ್ಗಳಿಕೆ. ಲಕ್ಷಾಂತರ ಹಕ್ಕಿಗಳು ಯಾವ ಅಡ್ಡಿ ಆತಂಕವಿಲ್ಲದೆ ಇಲ್ಲಿಗೆ ಬಂದುಹೋಗುತ್ತವೆ.